**1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು**
**LAC.No.84/2022**

**ಪಿ.ಡಬ್ಲ್ಯೂ. 1**

ದಿನಾಂಕಃ **02.12.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ **2** ನೇ ಎದುರುದಾರರ ಪರವಾಗಿಃ ಶ್ರೀ ಎಂ.ಬಿ.ಎನ್ ವಕೀಲರಿಂದಃ

1. 2017 ರಲ್ಲಿ ನನ್ನ ತಂದೆಯ ಜಮೀನು ಸ್ವಾಧೀನವಾದ ವಿಚಾರ ನನಗೆ ತಿಳಿಯಿತು. ದಿ.19.12.2017 ರಲ್ಲಿ ನನ್ನ ತಂದಗೆ ಎದುರುದಾರರಿಂದ ಮೊದಲ ನೋಟೀಸ್ ಜಾರಿಯಾಯಿತು. ಅವಾರ್ಡ್ ನಡವಳಿ ನಂತರ ನನ್ನ ತಂದೆ ಎದುರುದಾರರಿಗೆ ತಕರಾರು ಅರ್ಜಿ ಸಲ್ಲಿಸಿದ್ದೆ. ನನ್ನ ತಂದೆಗೆ ಮೊದಲನೇ ಮತ್ತು 2 ನೇ ನೋಟೀಸ್ ಜಾರಿಯಾದ ನಂತರ ತಕರಾರು ಕೊಟ್ಟಿರಲಿಲ್ಲ. ನನ್ನ ತಂದೆಯ ಜಮೀನಿನ ಪರಿಶೀಲನೆಗೆ ಎದುರುದಾರರ ಇಲಾಖೆಯ ಅಧಿಕಾರಿಗಳು ಬಂದಿದ್ದರು. ಎದುರುದಾರರು ನನ್ನ ತಂದೆಗೆ ನೋಟೀಸ್ ಜಾರಿ ಮಾಡಿದ ನಂತರ ನನ್ನ ತಂದೆಯ ಸಮಕ್ಷಮ ನಮ್ಮ ಜಮೀನನ್ನು ಪರಿಶೀಲಿಸಿ ನಂತರ ನನ್ನ ತಂದೆ ಹಾಜರುಪಡಿಸಿದ ದಾಖಲಾತಿಗಳನ್ನು ಸ್ವೀಕರಿಸಿ ಪರಿಹಾರ ನಿರ್ಧರಿಸಿದ್ದರು ಎಂದರೆ ಸರಿಯಲ್ಲ. 11(1) ನೋಟೀಫಿಕೇಷನ್ ದಿನಾಂಕಕ್ಕಿಂತ 3 ವರ್ಷಗಳ ಹಿಂದಿನ ನೊಂದಾಯಿತ ಕ್ರಯಪತ್ರ ಮತ್ತು

ಕರಾರುಪತ್ರಗಳನ್ನು ಪರಿಗಣಿಸಿ ಎದುರುದಾರರು ಸೂಕ್ತ ಮತ್ತು ವೈಜ್ಞಾನಿಕ ಪರಿಹಾರವನ್ನು ನಿಗಧಿಪಡಿಸಿರುತ್ತಾರೆ ಎಂದರೆ ಸರಿಯಲ್ಲ.

2. ತೋಟಗಾರಿಕೆ ಇಲಾಖೆ, ಅರಣ್ಯ ಇಲಾಖೆ, ಎಪಿಎಂಸಿ ಮತ್ತು ಲೋಕೋಪಯಾೀಗಿ ಇಲಾಖೆಯಿಂದ ದಾಖಲೆಗಳನ್ನು ಸಂಗ್ರಹಿಸಿ ವರದಿಯನ್ನು ಪರಿಶೀಲಿಸಿ ಜಮೀನಿನಲ್ಲಿದ್ದ ಮರಗಳು ಮತ್ತು ಮನೆ ಸೂಕ್ತ ಮತ್ತು ವೈಜ್ಞಾನಿಕ ಪರಿಹಾರವನ್ನು ನಿಗಧಿಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಯ ಜಮೀನಿನಿಂದ ವಾರ್ಷಿಕ ಆದಾಯ ಪಡೆಯುತ್ತಿದ್ದ ಬಗ್ಗೆ ನಾನು ಸೂಕ್ತ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಜಮೀನಿನಲ್ಲಿದ್ದ ಕೊಟ್ಟಿಗೆ ಮನೆ, ತೆಂಗಿನ ಕಾಯಿ ಸಂಗ್ರಹಣಾ ಕೊಠಡಿ ತಾತ್ಕಾಲಿಕ ಕೊಠಡಿಗಳು ಎಂದರೆ ಸರಿಯಲ್ಲ. ಜಮೀನಿನಲ್ಲಿ ವಾಸದ ಮನೆ ಶಿಥಿಲಗೊಂಡ ಮನೆ ಎಂದರೆ ಸರಿಯಲ್ಲ. ಲೋಕೋಪಯೋೀಗಿ ಇಲಾಖೆಯ ವರದಿಯ ಅಧಾರದಲ್ಲಿ ನನ್ನ ತಂದೆಯ ಜಮೀನಿನಲ್ಲಿ ಶೆಡ್ ಮತ್ತು ಮನೆಗೆ ಎದುರುದಾರರು ಸೂಕ್ತ ಪರಿಹಾರ ಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಜಮೀನಿನಲ್ಲಿದ್ದ ಮನೆ ಮತ್ತು ಶೆಡ್ ಗಳಿಗೆ ಸಂಬಂದಿಸಿದ ಇಲಾಖೆ ಮತ್ತು ತಜ್ಞರಿಂದ ಮೌಲ್ಯ ಮಾಪನ ಪಟ್ಟಿ ಪಡೆದು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

3. ಸರ್ವೇ ನಂ.297/1 ರಲ್ಲಿದ್ದ ಆರು ತೆಂಗಿನ ಮರ, 1 ಹೆಬ್ಬೇವು, 3 ಸಿಲ್ವರ್. 1 ಹುಣಸೇ ಸಸಿ 1 ಮಾವಿನ ಸಸಿ, 6 ಹುಣಸೇ ಮರ , 72

ಕಾಕಡ ಸಸಿ, 11 ತೇಗ, 1 ಆಲ , 1 ತೊಗಲಿ ಪೈಕಿ ನನ್ನ ತಂದೆಗೆ ಸೇರಿದ 6 ತೆಂಗಿನ ಮರ, 1 ಹೆಬೇಬವು,1 ಸಿಲ್ವರ್. 72 ಕಾಕಡ, 1 ಹುಣಸೇಮರದಲ್ಲಿ 1/2 ಭಾಗ ಭೂ ಸ್ವಾಧೀನವಾದ ಜಮೀನಿನಲ್ಲಿ ಇತ್ತು. ಉಳಿಕೆ ಮರಗಳು ನನ್ನ ದೊಡ್ಡಪ್ಪ ಪುಟ್ಟರಂಗಯ್ಯರವರ ಸ್ವಾಧೀನದ ಜಮೀನಿನಲ್ಲಿ ಇತ್ತು. ಸಾಕ್ಷಿ ಒಂದು ಕೊಟ್ಟಿಗೆ ಮನೆ ಇದೆ ಅನ್ನುತ್ತಾರೆ. ಕೊಟ್ಟಿಗೆ ಮನೆ ಇರಲಿಲ್ಲ ಎಂದರೆ ಸರಿಯಲ್ಲ. ನಿ.ಪಿ.16 ನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ.16 ನ್ನು ನನ್ನ ಉಪಯೋಗಕ್ಕೆ ಅನುಕೂಲವಾಗುವಂತೆ ಖಾಸಗಿ ವ್ಯಕ್ತಿಯಿಂದ ತಯಾರು ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಮೊದಲ ಮತ್ತು 2 ನೇ ನೋಟೀಸ್ ಸ್ವೀಕರಿಸಿದ ನಂತರ ನಿ.ಪಿ.16 ನ್ನು ಎದುರುದಾರರ ಇಲಾಖೆಯ ಮುಂದೆ ಹಾಜರುಪಡಿಸಿರಲಿಲ್ಲ ಎಂದರೆ ಸರಿ.

4. ಬೆಳ್ಳಾವಿ ಹೋಬಳಿ ತುಮಕೂರು ತಾಲ್ಲೂಕು ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಚೇಳೂರು ಹೋಬಳಿ ಗುಬ್ಬಿ ತಾಲ್ಲೂಕಿನ ವ್ಯಾಪ್ತಿಗೆ ಬರುತ್ತದೆ ಸಾಕ್ಷಿ ಎರಡು ಹೋಬಳಿಗಳು ಗಡಿ ಭಾಗದಲ್ಲಿ ಬರುತ್ತದೆ ಎಂದು ನುಡಿದಿರುತ್ತಾರೆ. ನಿ.ಪಿ.27 ಬೆಳ್ಳಾವಿ ಹೋಬಳಿಗೆ ಸಂಬಂಧಿಸಿದ್ದರಿಂದ ನನ್ನ ಜಮೀನಿಗೆ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.3 ರ ಆಧಾರದಲ್ಲಿ ಕ್ರಯಪತ್ರಗಳ ಕ್ರಯದ ಮೌಲ್ಯದ

ಸರಾಸರಿ ಆಧಾರದಲ್ಲಿ ಎದುರುದಾರರು ಪರಿಹಾರ ನಿಗಧಿಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.28 ನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾಖಲಾತಿ ನನ್ನ ಪ್ರಕರಣಕ್ಕೆ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.25 ನನ್ನ ಪ್ರಕರಣಕ್ಕೆ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ. ನಿಟ್ಟೂರು ಹೋಬಳಿ, ಚೇಳೂರು ಹೋಬಳಿ ಪ್ರತ್ಯೇಕ ಹೋಬಳಿಗಳು. ನಿ.ಪಿ.26 ನ್ನು ನಾನು ಮತ್ತು ನನ್ನ ಗ್ರಾಮಸ್ಥರು ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶಕ್ಕಾಗಿ ಸೃಷ್ಟಿಸಿ ಕೊಂಡಿದ್ದೇವೆ ಎಂದರೆ ಸರಿಯಲ್ಲ. ಎಂಎಂ ಕಾವಲ್ ಮತ್ತು ನಿಟ್ಟೂರು ಗ್ರಾಮ ಹಾಗೂ ನಿಟ್ಟೂರು ಹೋಬಳಿ ಬೇರೆ ಬೇರೆ ಗ್ರಾಮಗಳು ಎಂದರೆ ಸರಿ. ನಿಟ್ಟೂರಿನಿಂದ ಚೇಳೂರಿಗೆ 20 ರಿಂದ 25 ಕಿ.ಮೀ ಅಂತರ ಇದೆ ಎಂದರೆ ಸರಿಯಲ್ಲ. ನಿ.ಪಿ.26 ಮತ್ತು 27 ದಾಖಲಾತಿ ನನ್ನ ಜಮೀನಿನ ಪರಿಹಾರ ನಿರ್ದರಿಸಲು ಪೂರಕ ದಾಖಲಾತಿ ಅಲ್ಲ ಎಂದರೆ ಸರಿಯಲ್ಲ. ನಿ.ಪಿ.20 ಮತ್ತು 27 ದಾಖಲಾತಿ 2017 ರ ನಂತರದ ದಾಖಲಾತಿಯಾಗಿರುತ್ತದೆ ಸದರಿ ದಾಖಲಾತಿಯನ್ನು ಪರಿಹಾರ ನಿಗಧಿಪಡಿಸಲು ಪರಿಗಣಿಸುವಂತಿಲ್ಲ ಎಂದರೆ ಸರಿಯಲ್ಲ. ನಿ.ಪಿ.21 ವಸಂತಾನರಸಾಪುರ ಗ್ರಾಮಕ್ಕೆ ತುಮಕೂರು ನಗರ ವ್ಯಾಪ್ತಿಗೆ ಒಳಪಡುವುದರಿಂದ ನನ್ನ ಜಮೀನಿನ ಪರಿಹಾರ ನಿರ್ದರಿಸಲು ಸೂಕ್ತ ದಾಖಲಾತಿ ಅಲ್ಲ ಎಂರೆ ಸರಿಯಲ್ಲ. ನಿ.ಪಿ.21 ರ ಉದ್ದೇಶ ನನ್ನ ಜಮೀನು ಸ್ವಾಧೀನಪಡಿಸುವ ಉದ್ದೇಶ ಬೇರೆ ಬೇರೆ ಎಂದರೆ ಸರಿ.

ವಸಂತಾನರಸಾಪುರದಿಂದ ಎಂಎಎ ಕಾವಲ್ ಗ್ರಾಮಕ್ಕೆ 10 ರಿಂದ 15 ಕಿ.ಮೀ ಅಂತರ ಇದೆ ಎಂದರೆ ಸರಿಯಲ್ಲ, ಸಾಕ್ಷಿ 4 ಕಿ.ಮೀ ಅಂತರ ಇದೆ ಎಂದು ನುಡಿದಿರುತ್ತಾರೆ. ನಿ.ಪಿ.21 ನನ್ನ ಪ್ರಕರಣಕ್ಕೆ ಪರಿಹಾರ ನಿಗಧಿಪಡಿಸಲು ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.22 ರಿಂದ 24 ನನ್ನ ಪ್ರಕರಣಕ್ಕೆ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.26 ಮತ್ತು 27 ನ್ನು ಈ ಪ್ರಕರಣಕ್ಕೆ ಅನುಕೂಲವಾಗುವಂತೆ ನಾನು ಸೃಷ್ಟಿಸಿ ಹಾಜರುಪಡಿರುತ್ತೇನೆ ಎಂದರೆ ಸರಿಯಲ್ಲ.

5. ನಿ.ಪಿ.25 ಕುಚ್ಚಂಗಿ ಗ್ರಾಮಕ್ಕೆ ಸಂಬಂಧಿಸಿದ ಆದೇಶವಾಗಿದ್ದು ಎಂಎಂಎ ಕಾವಲ್ ಗೆ ಅನ್ವಯಮಾಗುವುದಿಲ್ಲ ಎಂದರೆ ಸರಿಯಲ್ಲ. ಗ್ರಾಮ ಮತ್ತು ಹೋಬಳಿ ಬೇರೆಯಾಗಿರುತ್ತದೆ ಸದರಿ ದಾಖಲಾತಿ ನನ್ನ ಪ್ರಕರಣಕ್ಕೆ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.20, 26, 27 ನ್ನು ನಮ್ಮ ಗ್ರಾಮಸ್ಥರು ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶಕ್ಕಾಗಿ ಸೃಷ್ಟಿತ ದಾಖಲಾತಿ ಎಂದರೆ ಸರಿಯಲ್ಲ. ಸದರಿ ದಾಖಲಾತಿ ಈ ಪ್ರಕರಣಕ್ಕೆ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.26 ಮತ್ತು 27 ಬೇರೆ ಗ್ರಾಮ, ಬೇರೆ ತಾಲ್ಲೂಕಿಗೆ ಸಂಬಂಧಿಸಿದ ದಾಖಲಾತಿ ಆಗಿರುವುದರಿಂದ ನನ್ನ ಜಮೀನಿಗೆ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ. 2017 ರಿಂದ ಹಿಂದಿನ 3 ವರ್ಷಗಳ ಕ್ರಯಪತ್ರವನ್ನು ಪರಿಗಣಿಸಿರುವುದರಿಂದ 2018 ಮತ್ತು 2019 ರ ಕ್ರಯಪತ್ರ ಅನ್ವಯವಾಗುವುದಿಲ್ಲ ಎಂದರೆ

ಸರಿಯಲ್ಲ. ನಿ.ಪಿ.25 ಬೇರೆ ಗ್ರಾಮಕ್ಕೆ ಸಂಬಂಧಿಸಿರುವುದರಿಂದ ನನ್ನ ಜಮೀನಿಗೆ ಪರಿಹಾರ ನಿಗಧಿಪಡಿಸಲು ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.26 ಮತ್ತು 27 ನನ್ನ ಪ್ರಕರಣಕ್ಕೆ ಅನ್ವಯವಾಗುವ ದಾಖಲಾತಿಗಳಲ್ಲ ಎಂದರೆ ಸರಿಯಲ್ಲ. 4 ಪಟ್ಟು ಹೆಚ್ಚು ಕ್ರಯದ ಮೌಲ್ಯವನ್ನು ಪರಿಹಾರವಾಗಿ ಪಾವತಿ ಮಾಡಿರುವುದರಿಂದ ನಾನು ಹೆಚ್ಚಿನ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ಸಂಬಂಧಿಸಿದ ಎಲ್ಲಾ ಇಲಾಖೆಗಳ ದಾಖಲಾತಿ ಮತ್ತು ವರದಿಗಳನ್ನು ಪರಿಶೀಲಿಸಿ ಎದುರುದಾರರು ಸೂಕ್ತ ಮತ್ತು ವೈಜ್ಞಾನಿಕ ಪರಿಹಾರವನ್ನು ನಿಗಧಿಪಡಿಸಿರುವುದರಿಂದ ನಾನು ಹೆಚ್ಚಿನ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣಪತ್ರದಲ್ಲಿ ನಮೂದು ಮಾಡಿರುವ ಬೆಲೆಗೆ ಸಂಬಂಧಿಸಿದಂತೆ ಯಾವುದೇ ದಾಖಲಾತಿಯನ್ನು ಹಾಜರುಡಿಪಸಿಲ್ಲ ಎಂದರೆ ಸರಿಯಲ್ಲ. ಮರಗಳ ಆದಾಯಕ್ಕೆ ಸಂಬಂಧಿಸಿದಂತೆ ನಾನು ದಾಖಲಾತಿ ಹಾಜರುಪಡಿಸಿಲ್ಲ ಎಂರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**)**

ಓ**.**ಹೇ**.**ಕೇ**.**ಸರಿ ಇದೆ**.**

**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು